PRAJAVANI 30.10.14

ಕ್ಯಾಂಪ್ಕೊ ಅಧ್ಯಕ್ಷ ಕೊಂಕೋಡಿ ಪದ್ಮನಾಭ ಅಭಿಮತ

# ಅಡಿಕೆಯಿಂದ ಔಷಧ: ಸಂಶೋಧನೆ ಅಗತ್ಯ

ಪ್ರಜಾವಾಣಿ ವಾರ್ತೆ



ವಿಟ್ಲದಲ್ಲಿ ಬುಧವಾರ 'ಅಡಿಕೆ ಕೃಷಿಯಲ್ಲಿ ಉತ್ಪಾದಕತೆ ಮತ್ತು ಮೌಲ್ಯವರ್ಧನೆ ಬಗ್ಗೆ ರೈತರೊಂದಿಗೆ ಸಂವಾದ' ಕಾರ್ಯಕ್ರಮವನ್ನು ಕ್ಯಾಂಪ್ಕೊ ಅಧ್ಯಕ್ಷ ಕೊಂಕೋಡಿ ಪದ್ಮನಾಭ ಉದ್ಘಾಟಿಸಿದರು.

ವಿಟ್ಲ: ಅಡಿಕೆಯಲ್ಲಿರುವ ಮಧುಮೇಹ ನಿರೋಧಕ, ಕ್ಯಾನ್ಸರ್ ನಿರೋಧಕ ಗುಣಗಳ ಬಗ್ಗೆ ಇನ್ನೂ ಹೆಚ್ಚಿನ ಅಧ್ಯಯನ ನಡೆಸಬೇಕು ಎಂದು ಕ್ಯಾಂಪ್ಕೊ ಅಧ್ಯಕ್ಷ ಕೊಂಕೋಡಿ ಪದ್ಮನಾಭ ಹೇಳಿದರು.

ವಿಟ್ಲ ಕೇಂದ್ರೀಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆ (ಸಿಪಿಸಿಆರ್‌ಐ) ಪ್ರಾಂತೀಯ ಕೇಂದ್ರದಲ್ಲಿ ಬುಧವಾರ 'ಅಡಿಕೆ ಕೃಷಿಯಲ್ಲಿ ಉತ್ಪಾದಕತೆ ಮತ್ತು ಮೌಲ್ಯವರ್ಧನೆ ಬಗ್ಗೆ ರೈತರೊಂದಿಗೆ ಸಂವಾದ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಅಡಿಕೆ ತೋಟಗಳನ್ನು ಆಪೋಷನಗೈಯುತ್ತಿರುವ ಅಡಿಕೆ ಎಲೆ ಹಳದಿ ರೋಗಕ್ಕೆ ಪರಿಣಾಮಕಾರಿ ಔಷಧಿಯನ್ನು ಪತ್ತೆ ಹಚ್ಚದಿರುವುದು ರೈತರ ಮೇಲೆ ಘೋರ ಪರಿಣಾಮ ಬೀರಲಿದೆ ಎಂದರು.

ವಿದೇಶಿ ಅಡಿಕೆ ಗುರುತಿಸಿ ಅವುಗಳ ರಫ್ತನ್ನು ನಿಯಂತ್ರಿಸುವುದಕ್ಕೆ ಪೂರಕ ಸಾಧನಗಳ ಆವಿಷ್ಕಾರ, ಮರ ಹತ್ತುವ, ಅಡಿಕೆ ಸುಲಿಯುವ, ಸಂಸ್ಕರಿಸುವ ಯಂತ್ರ ಸಾಧನಗಳು ರೈತರಿಗೆ ಸುಲಭವಾಗಿ ಸಿಗುವಂತಾಗಬೇಕು. ಸಿಪಿಸಿಆರ್‌ಐ, ಕೃಷಿ ವಿಶ್ವವಿದ್ಯಾನಿಲಯ, ತೋಟಗಾರಿಕಾ ಇಲಾಖೆಗಳು ಒಟ್ಟಾಗಿ ಅಡಿಕೆ ಕೃಷಿ ಉತ್ಪಾದಕತೆ ಹೆಚ್ಚಳ ಮತ್ತು ಮೌಲ್ಯವರ್ಧನೆಗೆ ಯೋಜನೆ ರೂಪಿಸಿರುವುದು ಆಶಾದಾಯಕ ಬೆಳವಣಿಗೆ. ಕ್ಯಾಂಪ್ಕೊ ಇದಕ್ಕೆ ಸಂಪೂರ್ಣ ಸಹಕಾರ ನೀಡಲಿದೆ ಎಂದು ತಿಳಿಸಿದರು.

ಅಡಿಕೆಯನ್ನು ಸರ್ಕಾರ ಔಷಧೀಯ ವಸ್ತುವಾಗಿ ಶಿಫಾರಸು ಮಾಡಬೇಕಾಗಿದೆ. ಉತ್ತೇಜಕ ಶಕ್ತಿಯಿರುವ ಅಡಿಕೆಯನ್ನು ಇನ್ನೂ ಹಲವಾರು ರೀತಿಯಲ್ಲಿ ಬಳಸುವ ತಂತ್ರಜ್ಞಾನ ಅಭಿವೃದ್ಧಿಯಾಗಬೇಕು ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾಸರಗೋಡು ಕೇಂದ್ರೀಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆ (ಸಿಪಿಸಿಆರ್‌ಐ)ಯ ನಿರ್ದೇಶಕ ಡಾ.ಚೌಡಪ್ಪ ಮಾತನಾಡಿ, ಇದೀಗ ದೇಶದ ನಾನಾ ಪ್ರದೇಶಗಳಲ್ಲಿ ಅಂದಾಜು 4,36,000 ಹೆಕ್ಟೇರ್ ಪ್ರದೇಶಗಳಲ್ಲಿ ಅಡಿಕೆ ಕೃಷಿ ಬೆಳೆಯುತ್ತಿದ್ದು, 6,08,000 ಟನ್‌ಗಿಂತಲೂ ಅಧಿಕ ಅಡಿಕೆ ಉತ್ಪಾದನೆಯಾಗುತ್ತಿದೆ. ಅಡಿಕೆಯ ಹಲವಾರು ಉತ್ಪನ್ನಗಳಿಗೆ ನಿಷೇಧ, ಅಡಿಕೆ ಸೇವನೆಯಲ್ಲಿ ಯುವಜನರ ನಿರಾಸಕ್ತಿ, ಕೊಳೆ ರೋಗದ ಪರಿಣಾಮ ಅಡಿಕೆ ಕೃಷಿಯ ಮೇಲೆ ಅನಿಶ್ಚಿತತೆಯ ವಾತಾವರಣ ಸೃಷ್ಟಿಸಿದೆ ಎಂದು ತಿಳಿಸಿದರು.

ಕಾಸರಗೋಡು ಸಿ.ಪಿ.ಸಿ.ಆರ್.ಐ.ನ ಯೋಜನಾ ಸಂಯೋಜಕ (ಪಾಮ್ಸ್) ಡಾ.ಎಚ್.ಪಿ. ಮಹೇಶ್ವರಪ್ಪ ಮಾತನಾಡಿದರು.

ಮುಖ್ಯ ಅತಿಥಿಯಾಗಿ ಕಲ್ಲಿಕೋಟೆ ಅಡಿಕೆ ಮತ್ತು ಸಾಂಬಾರು ಬೆಳೆಗಳ ಅಭಿವೃದ್ಧಿ ನಿರ್ದೇಶನಾಲಯದ ನಿರ್ದೇಶಕ ಡಾ.ಹೋಮಿ ಚೆರಿಯನ್, ಶಿವಮೊಗ್ಗ ಮ್ಯಾಮ್ಕೋಸ್ ಸಹಕಾರಿ ಸಂಸ್ಥೆಯ ನಿರ್ದೇಶಕ ಪಿ.ಎನ್. ಶಶಿಧರ, ಅಖಿಲ ಭಾರತ ಅಡಿಕೆ ಬೆಳೆಗಾರರ ಸಂಘದ ಅಧ್ಯಕ್ಷ ಮಂಚಿ ಶ್ರೀನಿವಾಸಾಚಾರ್, ಅಡಿಕೆ ಪತ್ರಿಕೆ ಸಂಪಾದಕ ಶ್ರೀಪಡ್ರೆ ಮತ್ತು ಪ್ರಗತಿಪರ ರೈತ ಬದನಾಜೆ ಪೂಗವನ ಶಂಕರ ಭಟ್, ಪ್ರಗತಿಪರ ಕೃಷಿಕ ಡಾ.ಡಿ.ಸಿ. ಚೌಟ, ಭಾಗವಹಿಸಿದ್ದರು. ಅಡಿಕೆ ಪತ್ರಿಕೆಯ ವಿಶೇಷ ಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು.

ಸಂವಾದದಲ್ಲಿ ದಕ್ಷಿಣ ಕನ್ನಡ, ಕಾಸರಗೋಡು ಜಿಲ್ಲೆಗಳ ಅಡಿಕೆ ಕೃಷಿಕರು ಪಾಲ್ಗೊಂಡಿದ್ದರು.

ವಿಟ್ಲ ಪ್ರಾದೇಶಿಕ ಸಿಪಿಸಿಆರ್‌ನ ಮುಖ್ಯಸ್ಥ ಡಾ ಕೆ.ಎಸ್.ಆನಂದ ಸ್ವಾಗತಿಸಿದರು. ವಿಜ್ಞಾನಿ ಡಾ.ಡಿ.ಜಗನ್ನಾಥನ್ ವಂದಿಸಿದರು. ವಿಜ್ಞಾನಿ ಡಾ ನಾಗರಾಜ್ ಎನ್.ಆರ್ ನಿರೂಪಿಸಿದರು.

